ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಿ.ಸಿ.ಃ 193/2020

ಪಿ. ಡಬ್ಲ್ಯುಃ 02
ಸಿ. ಡಬ್ಲ್ಯುಃ 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಜು |
| ತಂದೆ/ಪತಿಯ ಹೆಸರು | ಃ | ಚಾಮುಂಡೇಗೌಡ |
| ವಯಸ್ಸು | ಃ | 50 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಬೆಳಗೊಳ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ

21.12.2021

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ಪಿರ್ಯಾದಿ ನನ್ನ ತಮ್ಮ. ಆರೋಪಿತರು ನನಗೆ ಗೊತ್ತು. ಸುಮಾರು ಒಂದೂವರೆ ವರ್ಷಗಳ ಹಿಂದೆ ಮಧ್ಯಾಹ್ನ 03.30 ಗಂಟೆ ಸಮಯದಲ್ಲಿ ನಮ್ಮ ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರಕ್ಕೆ ಜಗಳ ನಡೆದಿರುತ್ತದೆ. ಬೆಳಗೊಳದಲ್ಲಿರುವ ನಮ್ಮ ಜಮೀನಿನ ಹತ್ತಿರ ನಾನು ಮತ್ತು ನನ್ನ ತಮ್ಮ ಕೆಲಸ ಮಾಡುತ್ತಿದ್ದಾಗ ನಮ್ಮ ಪಕ್ಕದ ಜಮೀನಿನ ತಮ್ಮಣ್ಣ, ನವೀನ್, ಪವನ್, ಸ್ವಾಮಿ ಹಾಗೂ ನವೀನ್ ಕುಮಾರ್ ನ ಇಬ್ಬರು ಸ್ನೇಹಿತರು ನಮ್ಮ ಜಮೀನಿನ ಒಳಗೆ ಬಂದು ನೀವು ಜಮೀನಿನಲ್ಲಿ ಕೆಲಸ ಮಾಡಬೇಡಿ ಎಂದು ಹೇಳಿ ನಮಗೆ ಕೆಟ್ಟ ಮಾತುಗಳಿಂದ ಬೈದು ಗುದ್ದಲಿ ತಗೆದುಕೊಂಡು ಬಂದು ತಮ್ಮಣ್ಣ, ನವೀನ್ , ಪವನ್, ಸ್ವಾಮಿ ರವರು ನನ್ನ ಬಲಗೈಗೆ ಹೊಡೆದಿರುತ್ತಾರೆ. ನನ್ನ ತಮ್ಮ ರವಿಗೆ ತಮ್ಮಣ್ಣ, ನವೀನ್ , ಪವನ್, ಸ್ವಾಮಿ ರವರು ದೊಣ್ಣೆಯಿಂದ ಕೈ ಬೆರಳುಗಳಿಗೆ ಹೊಡೆದಿರುತ್ತಾರೆ. ಅದ್ದರಿಂದ ನನಗೆ ಮತ್ತು ನನ್ನ ತಮ್ಮನಿಗೆ ಗಾಯವುಂಟಾಗಿರುತ್ತದೆ. ನಂತರ ಪುಟ್ಟಸ್ವಾಮಣ್ಣ ಮತ್ತು ಗೋವಿಂದರಾಜು ಎನ್ನುವವರು ನನ್ನನ್ನು ಶ್ರೀರಂಗಪಟ್ಟಣದ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿರುತ್ತಾರೆ. ನಂತರ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ನನ್ನ ಮತ್ತು ನನ್ನ ತಮ್ಮನ ಮೇಲೆ ಗಲಾಟೆ ಮಾಡಿ ಹಲ್ಲೆ ನಡೆಸಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ. ಗಲಾಟೆ ಸಮಯದಲ್ಲಿ ಆರೋಪಿಯರು

ಹೊಡೆಯಲು ಉಪಯೋಗಿಸಿದ್ದ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ದೊಣ್ಣೆ ಮತ್ತು ಗುದ್ದಲಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾಲು.1 ಮತ್ತು 2 ಎಂದು ಗುರುತಿಸಲಾಗಿದೆ.

**<u>ಪಾಟಿ ಸವಾಲುಃ ಮಾನ್ಯ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಕಾರಣಗಳಿಲಿಲ್ಲದಿಂದ ರಿಂದ ಪ್ರಾರ್ಥನೆಯನ್ನು ತಿರಸ್ಕರಿಸಿ ಪಾಟಿ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.